B

SL. No. : CCC

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]
ಸಂಕೇತ ಸಂಖ್ಯೆ : 96-K

**CCE RF**
**CCE RR**
**Revised & Unrevised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8
Code No. : 96-K

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಭಾಷಾಂತರ / Kannada Version)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

ದಿನಾಂಕ : 23. 03. 2019 ] [ Date : 23. 03. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here



www.careerindia.com

CAREERINDIA



I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾದದ್ದು

   (A) 1774

   (B) 1934

   (C) 1935

   (D) 1909

2. ಬ್ರಿಟಿಷರು ಭಾರತದಲ್ಲಿ ರೈಲು ಸಾರಿಗೆಯನ್ನು ಸ್ಥಾಪಿಸಲು ಕಾರಣ

   (A) ಜನಸಾಮಾನ್ಯರ ಪ್ರಯಾಣಕ್ಕೆ ಸಹಾಯವಾಗಲು

   (B) ತಮ್ಮ ವ್ಯಾಪಾರ ಮತ್ತು ಆಡಳಿತದ ಸಹಕಾರಕ್ಕೆ

   (C) ರಾಜಮನೆತನಗಳಿಗೆ ನೆರವಾಗಲು

   (D) 1857 ರ ದಂಗೆಯನ್ನು ನಿಗ್ರಹಿಸಲು

3. ಭಾರತದಲ್ಲಿ ಮೊಟ್ಟ ಮೊದಲು ವಿಮಾನ ಸಾರಿಗೆ ಸಂಚಾರ ಸೇವೆ ಆರಂಭವಾದದ್ದು

   (A) ಅಲಹಾಬಾದ್ ಮತ್ತು ದೆಹಲಿ ನಡುವೆ

   (B) ದೆಹಲಿ ಮತ್ತು ಕೊಲ್ಕತ್ತಾ ನಡುವೆ

   (C) ಮುಂಬೈ ಮತ್ತು ದೆಹಲಿ ನಡುವೆ

   (D) ಅಲಹಾಬಾದ್ ಮತ್ತು ನೈನಿ ನಡುವೆ

4. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಪ್ರಮುಖ ಉದ್ದೇಶ

   (A) ಗ್ರಾಮೀಣ ಪ್ರದೇಶಗಳಲ್ಲಿ ಬಡತನದ ನಿರ್ಮೂಲನೆ

   (B) ನಗರ ಪ್ರದೇಶಗಳಲ್ಲಿ ಬಡತನ ನಿರ್ಮೂಲನೆ

   (C) ಗ್ರಾಮೀಣ ಪ್ರದೇಶಗಳಿಗೆ ಮೂಲಭೂತ ಸೌಕರ್ಯಗಳ ಒದಗಿಸುವಿಕೆ

   (D) ಗ್ರಾಮೀಣ ಪ್ರದೇಶಗಳಿಗೆ ಆರೋಗ್ಯ ಸೌಲಭ್ಯಗಳ ಒದಗಿಸುವಿಕೆ

www.careerindia.com

CAREERINDIA



5. ಭಾರತದ ಸಂವಿಧಾನದಲ್ಲಿ ಕಾರ್ಮಿಕ ನೀತಿಯನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ

   (A) ಕೇಂದ್ರ ಪಟ್ಟಿ

   (B) ರಾಜ್ಯ ಪಟ್ಟಿ

   (C) ಸಮವರ್ತಿ ಪಟ್ಟಿ

   (D) ಕೇಂದ್ರಾಡಳಿತ ಪ್ರಾದೇಶಿಕ ಪಟ್ಟಿ

6. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಿರುವುದು ಪ್ರಮುಖವಾಗಿ

   (A) ಬೃಹತ್ ಕೈಗಾರಿಕೆಗಳಿಗೆ ಹಣಕಾಸಿನ ನೆರವು ಒದಗಿಸಲು

   (B) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಣಕಾಸಿನ ನೆರವು ಒದಗಿಸಲು

   (C) ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಹಣಕಾಸಿನ ನೆರವು ಒದಗಿಸಲು

   (D) ಕೈಗಾರಿಕಾ ಕಾರ್ಮಿಕರಿಗೆ ಹಣಕಾಸಿನ ನೆರವು ಒದಗಿಸಲು

7. 2011 ರ ಜನಗಣತಿಯ ಪ್ರಕಾರ ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆಯನ್ನು ಹೊಂದಿರುವ ರಾಜ್ಯ

   (A) ಪಶ್ಚಿಮ ಬಂಗಾಳ

   (B) ಮಹಾರಾಷ್ಟ್ರ

   (C) ಉತ್ತರ ಪ್ರದೇಶ

   (D) ಬಿಹಾರ

8. ಇವುಗಳಲ್ಲಿ ದ್ರವರೂಪದ ಚಿನ್ನ

   (A) ಕಲ್ಲಿದಲು

   (B) ಪೆಟ್ರೋಲಿಯಂ

   (C) ನೈಸರ್ಗಿಕ ಅನಿಲ

   (D) ಮ್ಯಾಂಗನೀಸ್

www.careerindia.com

CAREERINDIA



9. ಭಾರತದಲ್ಲಿ ಅತಿ ಹೆಚ್ಚು ಚಿನ್ನ ಉತ್ಪಾದಿಸುವ ರಾಜ್ಯ

   (A) ರಾಜಸ್ಥಾನ

   (B) ಆಂಧ್ರ ಪ್ರದೇಶ

   (C) ಕರ್ನಾಟಕ

   (D) ತಮಿಳುನಾಡು

10. ಆರೋಗ್ಯವಂತ ಜೀವನ, ಜ್ಞಾನ ಮತ್ತು ಜೀವನಮಟ್ಟ ಇವು

   (A) ಮಾನವ ಅಭಿವೃದ್ಧಿ ಸೂಚ್ಯಂಕ

   (B) ಜನಸಂಖ್ಯೆ ಹೆಚ್ಚಳಕ್ಕೆ ಕಾರಣ

   (C) ಹಿಂದುಳಿದಿರುವಿಕೆಗೆ ಕಾರಣ

   (D) ಲಿಂಗ ಅಭಿವೃದ್ಧಿ ಸೂಚ್ಯಂಕ

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ಲಾರ್ಡ್ ಕಾರ್ನ್‌ವಾಲಿಸ್ | (i) ಗೇಣಿ ಪದ್ಧತಿ |
| (B) ಥಾಮಸ್ ಮನ್ರೋ | (ii) ಯೋಜನಾ ಆಯೋಗದ ಮುಖ್ಯಸ್ಥರು |
| (C) ನಾರ್ಮನ್ ಬೋರ್ಲಾಗ್ | (iii) ಜಮೀನ್ದಾರಿ ಪದ್ಧತಿ |
| (D) ಸರ್ ಎಂ. ವಿಶ್ವೇಶ್ವರಯ್ಯ | (iv) ರೈತವಾರಿ ಪದ್ಧತಿ |
| (E) ಜವಾಹರಲಾಲ್ ನೆಹರೂ | (v) ಕೈಗಾರಿಕೀಕರಣಗೊಳಿಸಿ ಇಲ್ಲವೇ ನಾಶವಾಗಿ |
| | (vi) ಹಸಿರು ಕ್ರಾಂತಿಯ ಪಿತಾಮಹ |
| | (vii) ಮಹಲ್ವಾರಿ ಪದ್ಧತಿ |

www.careerindia.com

CAREERINDIA



III. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಆಂತರಿಕ ಮತ್ತು ಬಾಹ್ಯ ವ್ಯಾಪಾರಗಳನ್ನು ವ್ಯತ್ಯಾಸಿಸಿ.

13. ಭಾರತದ ಪ್ರಮುಖ ಆಮದುಗಳು ಯಾವುವು ?

14. ವಿದೇಶಿ ವಿನಿಮಯವನ್ನು ವ್ಯಾಖ್ಯಾನಿಸಿ.

15. ವ್ಯಾಪಾರ ಎಂದರೇನು ?

16. ಭಾರತದ ಮೊಟ್ಟ ಮೊದಲ ರೈಲು ಯಾವ ನಿಲ್ದಾಣಗಳ ನಡುವೆ ಚಲಿಸಿತು ?

17. ಬಡತನ ಎಂದರೇನು ?

18. ಜೀತ ಪದ್ಧತಿಯ ನಿರ್ಮೂಲನಾ ಕಾಯಿದೆಯನ್ನು ಯಾವಾಗ ಜಾರಿಗೊಳಿಸಲಾಯಿತು ?

19. ಯಾವ ಆಧಾರದ ಮೇಲೆ ಕೃಷಿ ಪತ್ತಿನ ಸಂಘಗಳು ಕಾರ್ಯ ನಿರ್ವಹಿಸುತ್ತವೆ ?

20. ರಾಷ್ಟ್ರೀಯ ಜನಸಂಖ್ಯಾ ನೀತಿ 1976 ರ ಪ್ರಮುಖ ಉದ್ದೇಶವೇನು ?

21. ಜನಸಾಂದ್ರತೆಯನ್ನು ವ್ಯಾಖ್ಯಾನಿಸಿ.

22. ಕಪ್ಪು ವಜ್ರ ಯಾವುದು ?

23. ಬಾಕ್ಸೈಟ್‌ನ ಉಪಯೋಗಗಳಾವುವು ?

24. ಮಣ್ಣಿನ ಸವೆತ ಎಂದರೇನು ?

25. ಅಭಿವೃದ್ಧಿಯತ್ತ ಮುನ್ನಡೆಯಲು ಅನಭಿವೃದ್ಧಿ ರಾಷ್ಟ್ರಗಳಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇದೆ. ಹೇಗೆ ?

26. ಬಡತನದ ತೀವ್ರತೆ ಹೆಚ್ಚಾಗಿರುವ ರಾಷ್ಟ್ರಗಳಲ್ಲಿ ಕಂಡುಬರುವ ಸಾಮಾನ್ಯ ಅಂಶಗಳು ಯಾವುವು ?



www.careerindia.com

CAREERINDIA



IV. **ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** $14 \times 2 = 28$

27. ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ಮೇಲ್ವಿಚಾರಣಾ ಮಂಡಳಿಯ ಕಾರ್ಯಗಳು ಯಾವುವು ?

28. ಭಾರತೀಯ ರಿಸರ್ವ್ ಬ್ಯಾಂಕ್ ನಮ್ಮ ಸರ್ಕಾರಿ ಬ್ಯಾಂಕ್ ಆಗಿದೆ. ವಿಶ್ಲೇಷಿಸಿ.

29. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಮುಖ ಪ್ರಕಟಣೆಗಳು ಯಾವುವು ?

30. ಭಾರತದ ರಸ್ತೆಗಳನ್ನು ಹೇಗೆ ವಿಂಗಡಿಸಲಾಗಿದೆ ?

31. ಆರ್ಥಿಕ ಮೂಲಭೂತ ಸೌಕರ್ಯಗಳಿಗೂ ಮತ್ತು ಸಾಮಾಜಿಕ ಮೂಲಭೂತ ಸೌಕರ್ಯಗಳಿಗೂ ಉದಾಹರಣೆಗಳನ್ನು ಕೊಡಿ.

32. ಸಾಪೇಕ್ಷ ಬಡತನವನ್ನು ವ್ಯಾಖ್ಯಾನಿಸಿ.

33. ಕೈಗಾರಿಕಾ ಕಾರ್ಮಿಕರು ತಮ್ಮ ಅಸಹನೆಯನ್ನು ಮುಂದಿಡಲು ಬಳಸುವ ನಾಲ್ಕು ಅಸ್ತ್ರಗಳನ್ನು ಹೆಸರಿಸಿ.

34. ಸಣ್ಣ ಕೈಗಾರಿಕೆಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ ಎಂದು ಹೇಗೆ ಹೇಳುವಿರಿ ?

35. ಕೈಗಾರಿಕಾ ಎಸ್ಟೇಟ್‌ಗಳ ಅಗತ್ಯತೆ ಏನು ?

36. ಕಾಲಾವಧಿಯ ಆಧಾರದ ಮೇಲೆ ಕೃಷಿ ಹಣಕಾಸಿನ ಪ್ರಕಾರಗಳು ಯಾವುವು ?

37. ಭಾರತದಲ್ಲಿನ ಜನಸಂಖ್ಯೆಯು ಏರಿಕೆಯಾಗಲು ಸಾಮಾಜಿಕ ಅಂಶಗಳು ಹೇಗೆ ಕಾರಣವಾಗಿವೆ ?

38. ಭಾರತದಲ್ಲಿ ಸ್ಥಾಪಿಸಲಾಗಿರುವ ಅಣು ಸ್ಥಾವರಗಳನ್ನು ಹೆಸರಿಸಿ.

39. ಅಭಿವೃದ್ಧಿಶೀಲ ರಾಷ್ಟ್ರವಾಗಿ ಭಾರತವನ್ನು ವಿವರಿಸಿ.

40. ಅಭಿವೃದ್ಧಿ ಮತ್ತು ಅನಭಿವೃದ್ಧಿ ರಾಷ್ಟ್ರಗಳ ಆರ್ಥಿಕತೆಗಳ ನಡುವೆ ವ್ಯತ್ಯಾಸಿಸಿ.

www.careerindia.com

CAREERINDIA



V. **ಈ ಕೆಳಗಿನ ಪ್ರಶ್ನೆಗಳಿಗೆ ಐದರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

41. ವಿದೇಶಿ ವ್ಯಾಪಾರದ ಅಗತ್ಯತೆ ಏನು ?

42. ಭಾರತ ಸರ್ಕಾರವು ಕೈಗೊಂಡಿರುವ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಪಟ್ಟಿಮಾಡಿ.

43. ಭಾರತದಲ್ಲಿ ಕೃಷಿ ಕಾರ್ಮಿಕರ ಸ್ಥಿತಿಯು ಉತ್ತಮವಾಗಿಲ್ಲ. ಏಕೆ ?

44. ಲೇವಾದೇವಿಗಾರರು ಕೃಷಿ ಹಣಕಾಸಿನಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಹೇಗೆ ?

45. ಭಾರತದಲ್ಲಿ ನೀರಾವರಿಯ ಮೂಲಗಳಾವುವು ?

46. ಕುಟುಂಬ ಯೋಜನೆಯ ಉದ್ದೇಶಗಳು ಯಾವುವು ?

VI. **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ :** $1 \times 4 = 4$

47. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕಾಭಿವೃದ್ಧಿಯ ಮಹತ್ವ ಬರೆಯಿರಿ.

www.careerindia.com

CAREERINDIA



www.careerindia.com